# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 21/04/2022 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ವಾರ್ಡ್ 77 ದತ್ತಾತ್ರೇಯ ದೇವಸ್ಥಾನದ ಸಭೆಯ ನಡವಳಿಗಳು

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು. ಈ ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

1) ಹಾಜರಿದ ಅಧಿಕಾರಿಗಳು:

- ಜ್ಯೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
- ಬಿ. ಡಬ್ಲ್ಯೂ.ಎಸ್.ಎಸ್.ಬಿ ಇನ್ಸ್‌ಪೆಕ್ಟರ್
- ಸಿನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
- ರೆವೆನ್ಯೂ ಅಧಿಕಾರಿಗಳು
- ಎಸ್.ಡ್ಯೂ.ಡಿ ಅಧಿಕಾರಿಗಳು
- ಬೆಸ್ಕಂ ಅಧಿಕಾರಿಗಳು

2) ಹಿಂದಿನ ಸಭೆಯ ನಡುವಳಿಯನ್ನು ಸಭೆಯಲ್ಲಿ ಚರ್ಚಿಸಿದಂತೆ ಸೂಕ್ತ ಕ್ರಮವಹಿಸಲು ಸಭೆಗೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟವರಿಗೆ ತಿಳಿಸಿದರು.

3) ವಿದ್ಯುತ್ ದೀಪ ನಿರ್ವಹಣೆ ಮತ್ತು ಪೊಲೀಸ್ ಇಲಾಖೆಗೆ ಸಂಬಂಧ ಪಟ್ಟ ಅಧಿಕಾರಿಗಳು ಹಾಜರಿರುವುದಿಲ್ಲ.

4) ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ವಾರ್ಡ್ ನಲ್ಲಿ ಮಸ್ಕಿಟೋಸ್‌ಗೆ ಸಂಬಂಧಿಸಿದಂತೆ ಮುಂಜಾಗ್ರಾತೆ ಕ್ರಮ ಕೈಗೋಳಾಗುತ್ತಿದ್ದು ಹಾಗೆಯೇ ಕೋವಿಡ್‌ವ್ಯಾಕ್ಸಿನ್ 60 ವರ್ಷ ದಾಟಿದವರಿಗೆ ಮತ್ತು ಫ್ರಂಟ್ ಲೇನ್ ವರ್ಕರ್‌ಗೆ ಬೂಸ್ಟರ್ ಡೋಸ್ ನೀಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

5) ರೆವೆನ್ಯೂ ಅಧಿಕಾರಿಗಳು ಮಾತನಾಡುತ್ತ ಕಳೆದ ಒಂದು ವರ್ಷದಿಂದ ಕಚೇರಿಯ ವಿದ್ಯುತ್‌ಬಿಲ್ ಪಾವತಿಸದೇ ಇರುವುದರಿಂದ ಸಮಸ್ಯೆ ಆಗಿದೆ ಎಂದು ಸಭೆಗೆ ತಿಳಿಸಿದರು. ನೋಡಲ್ ಅಧಿಕಾರಿಯವರು ಕೂಡಲೇ ಕ್ರಮ ವಹಿಸಿ ಎಂದು ವಾರ್ಡ್ ಇಂಜಿನಿರ್‌ರವರಿಗೆ ತಿಳಿಸಿದರು.

6) ಕಳೆದ 6 ತಿಂಗಳಿಂದ ಅಂಗನವಾಡಿಯ ಸಮಸ್ಯೆ ಇದೆ ಕೂಡಲೇ ಅಂಗನವಾಡಿಗೆ ಚಾವಣಿ ಮತ್ತು ವಿದ್ಯುತ್ ದೀಪ ಅಳವಡಿಸಬೇಕೆಂದು ವಾರ್ಡ್ ಸದಸ್ಯರು ಸಭೆಗೆ ಕೋರಿದರು. ವಾರ್ಡ್ ಇಂಜಿನಿರ್‌ರವರು ಕೂಡಲೇ ಸರಿಪಡಿಸಲಾಗುವುದು ಎಂದು ತಿಳಿಸಿದರು.

7) ವಿವೇಕಾನಂದ ಬ್ಲಾಕ್ ನಲ್ಲಿ ಸುಮಾರು 2 ತಿಂಗಳಿಂದ ಕುಡಿಯುವ ನೀರಿಗೆ ಗಲಿಜು ನೀರು ಸೇರುತ್ತಿದೆ. ಆದ್ದರಿಂದ ಕೂಡಲೇ ಸರಿ ಪಡಿಸಬೇಕೆಂದು ವಾರ್ಡ್ ಸದಸ್ಯರು ಸಭೆಗೆ

ಕೋರಿದರು. ಬಿ.ಡ್ಬ್ಯೂ.ಎಸ್.ಎಸ್ ಅಧಿಕಾರಿಗಳು ಕೂಡಲೇ ಸರಿಪಡಿಸುವುದಾಗಿ ಸಭೆಗೆ ತಿಳಿಸಿದರು.

8) ಶೇಷಾದ್ರಿಪುರಂ ಮೊದಲನೇ ರಸ್ತೆಯಲ್ಲಿ ವೈಟ್‌ಟ್ಯಾಪಿಂಗ್ ಕಾರ್ಯವು ಪ್ರಗತಿಯಲ್ಲಿದ್ದು Bluebiss ಆಸ್ಪತ್ರೆ ಹತ್ತಿರ ವಿದ್ಯುತ್ ದೀಪವು ಕೂಡಲೇ ಅಳವಡಿಸಬೇಕೆಂದು ಸದಸ್ಯರು ಸಭೆಗೆ ಕೋರಿದರು. ಕೂಡಲೇ ಸರಿಪಡಿಸುವುದಾಗಿ ವಾರ್ಡ್ ಇಂಜಿನಿರ್ ಸಭೆಗೆ ತಿಳಿಸಿದರು.

9) ವಿದ್ಯುತ್ ದೀಪಗಳು ನಿರ್ವಹಣೆ ಸರಿಯಾಗಿ ನಡೆಯುತ್ತಿಲ್ಲ ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುತ್ತದೆ. ಇದೇ ರೀತಿ ಮುಂದುವರಿದರೇ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿ ಪತ್ರ ಬರೆಯಲಾಗುವುದೆಂದು ನೋಡಲ್ ಅಧಿಕಾರಿ ರವರು ಸಭೆಗೆ ತಿಳಿಸಿದರು.

10) ವಾರ್ಡ್ ಸಭೆಗೆ ಅಧಿಕಾರಿಗಳು ಮತ್ತು ಪೋಲಿಸ್ ಸಿಬ್ಬಂದಿಗಳು ಸರಿಯಾಗಿ ಹಾಜರಾಗುತ್ತಿಲ್ಲ ಆದ್ದರಿಂದ ಸಾರ್ವಜನಿಕರ ಕುಂದು-ಕೊರತೆಗಳು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ವಾರ್ಡ್ ಸದಸ್ಯರು ನೋಡಲ್ ಅಧಿಕಾರಿಗೆ ತಿಳಿಸಿದರು. ನೋಡಲ್ ಅಧಿಕಾರಿಗಳು ಮತಾನಾಡುತ್ತ ಮುಂದಿನ ಸಭೆಗಳಗೆ ಕಡ್ಡಾಯವಾಗಿ ಹಾಜರಿರುವಂತೆ ಮುಂಚಿತವಾಗಿಯೇ ಸಭೆಯ ಸೂಚನಾ ಪತ್ರವನ್ನು ಸಂಬಂಧಪಟ್ಟವರಿಗೆ ನೀಡಬೇಕೆಂದು ವಾರ್ಡ್ ಇಂಜಿನಿಯರ್‌ಗಳಗೆ ಸೂಚಿಸಿದರು.

**ನೋಡಲ್ ಅಧಿಕಾರಿಗಳು**
**ವಾರ್ಡ್ ಸಂ.77,**
**ದತ್ತಾತ್ರೇಯ ದೇವಸ್ಥಾನ ವಾರ್ಡ್**

**<u>ಪ್ರತಿಯನ್ನು:-</u>**

1. ವಿಶೇಷ ಆಯುಕ್ತರು (ಆಡಳತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.